ಒ.ಎಸ್. ಸಂಃ 327/2024 ಸಿ.ಡಬ್ಲ್ಯು: 01

## ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಒ.ಎಸ್ ನಂ. 327/2024

ದಿಃ **02-08-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | ಲಿಖಿತ ಎನ್.ಎಸ್ | ಸಿ.ಡಬ್ಲ್ಯೂ | **01** |
| ವಯಸ್ಸು | 34 ವರ್ಷ | | |
| ತಂದೆಯ / ಗಂಡನ ಹೆಸರು | ವೆಂಕಟೇಶ್ ಬಾಬು ಎಸ್ | | |
| ವೃತ್ತಿ | ಭೂ ದಾಖಲೆಗಳ ಸಹಾಯಕ ನಿರ್ದೇಶಕರು | | |
| ವಾಸಸ್ಥಳ | ಬೆಂಗಳೂರು | | |

ನ್ಯಾಯಾಲಯದಿಂದ ಈ ಪ್ರಕರಣದಲ್ಲಿ ಕಮಿಶನರ್ ಕೆಲಸ ನಿರ್ವಹಿಸುವಂತೆ ನನಗೆ ವಾರಂಟ್ ಬಂದ ಮೇರೆಗೆ ಅದನ್ನು ಸ್ವೀಕರಿಸಿ ನಂತರ ದಿನಾಂಕ 20.05.2025 ರಂದು ಉಭಯ ಪಕ್ಷದಾರರಿಗೆ ನೋಟೀಸನ್ನು ನೀಡಿ ದಿನಾಂಕ 04.06.2025 ರಂದು ಸ್ಥಳಕ್ಕೆ ಹೋಗಿ ಸ್ಥಳ ತನಿಖೆ ಮಾಡಿರುತ್ತೇನೆ.

ಸದರಿ ಕಾಲಕ್ಕೆ ಉಭಾಯ ಪಕ್ಷದಾರರು ಹಾಜರಿದ್ದು ನಮ್ಮ ಇಲಾಖೆಯಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಹಿರೇಬಿದನೂರು ಗ್ರಾಮದ ಸರ್ವೆ ನಂ. 45/15 ಮತ್ತು 45/17 ರ ಆಸ್ತಿಗಳನ್ನು ಅಳತೆ ಮಾಡಿ, ಮಹಜರ್ ಅನ್ನು ಸಿದ್ಧಪಡಿಸಿ ಬಾಂದ್ ಕಲ್ಲುಗಳನ್ನು ತೋರಿಸಿ ನಕ್ಷೆಯನ್ನು ತಯಾರು ಮಾಡಿ ಉಭಯ ಪಕ್ಷದಾರರ ಸಹಿಗಳನ್ನು ಪಡೆದು ನಂತರ ನ್ಯಾಯಾಲಯಕ್ಕೆ ನನ್ನ ವರದಿಯನ್ನು ದಿನಾಂಕ 11.06.2025 ರಂದು ಸಲ್ಲಿಸಿರುತ್ತೇನೆ.

ಸದರಿ ನನ್ನ ತನಿಖೆಯಲ್ಲಿ ಯಾವುದೇ ಒತ್ತುವರಿ ಇಲ್ಲ ಎಂದು ನನಗೆ ಕಂಡು ಬಂದಿದ್ದು ಅದರಂತೆ ನಾನು ವರದಿಯನ್ನು ನೀಡಿರುತ್ತೇನೆ.

ಸಾಕ್ಷಿಗೆ ತನ್ನ ವರದಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-1 ಎಂದು, ನಕ್ಷೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು

ಅದನ್ನು ನಿಸಿ-2 ಎಂದು, ಮಹಜರ್ ಅನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-3, ದಿನಾಂಕ 20.05.2025 ರ ನೋಟೀಸನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-4, 3 ಅಂಚೆ ರಸೀದಿಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಸಿ-5 ರಿಂದ 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ವಾದಿಯ ಪರ ಶ್ರೀ ಬಿ.ಎಲ್ ವಕೀಲರಿಂದಃ</u>

ನ್ಯಾಯಾಲಯದಿಂದ ಬಂದ ವಾರಂಟ್ ಅನ್ನು ನಾನು ಓದಿದ್ದೇನೆ. ಸದರಿ ವಾರಂಟ್ ನಲ್ಲಿ ವಾದಿಯ ಆಸ್ತಿಯ ಅಳೆಯುುವ ವಿಧಾನವನ್ನು ಬರೆಯಲಾಗಿದೆ ಎಂದರೆ ಸರಿ. ಯಾವ ಯಾವ ದಾಖಲೆಗಳ ಆಧಾರದ ಮೇಲೆ ವಾದಿಯ ಆಸ್ತಿಯನ್ನು ಅಳೆಯಬೇಕು ಎಂದು ಸದರಿ ವಾರಂಟ್ ನಲ್ಲಿ ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಸೂಚನಾವಳಿಯನ್ನು ತಿಳಿದುಕೊಂಡಿದ್ದೇನೆ ಎಂದರೆ ಸರಿ.ವಾದಿ ಮತ್ತು ಪ್ರತಿವಾದಿ ಸಲ್ಲಿಸಿರುವ ಸೂಚನಾವಳಿಗಳು ನನ್ನ ಬಳಿ ಇವೆ. ವಾದಿಯು ಸಲ್ಲಿಸಿರುವ ಸೂಚನಾವಳಿಯಲ್ಲಿ ನಮೂದಿಸಿರುವ ಅಂಶಗಳು ಈಗ ನೆನಪಿಲ್ಲ. ವಾರಂಟ್ ಬಂದ ನಂತರ ನಾನು ದಾವಾ ಆಸ್ತಿಗೆ 2 ಭಾರಿ ಭೇಟಿ ನೀಡಿದ್ದೇನೆ. ದಿನಾಂಕ 06-12-2024 ಮತ್ತು 04-06-2025 ರಂದು 2 ಬಾರಿ ಭೇಟಿ ನೀಡಿದ್ದೇನೆ. ಸದರಿ 2 ಭೇಟಿಗಳು ಈ ಪ್ರಕರಣದಲ್ಲಿ ನೀಡಿರುವ ವಾರಂಟ್ ನ ಆಧಾರದ ಮೇಲೆ ಆಗಿರುತ್ತದೆ. ಮೊದಲನೇ ಭೇಟಿಯ ಪೂರ್ವದಲ್ಲಿ ಪಕ್ಷಗಾರರಿಗೆ ನೋಟೀಸ್ ಕೊಟ್ಟಿದ್ದೆ. ಸದರಿ ನೋಟೀಸ್ ಕೊಟ್ಟ ದಿನಾಂಕ 28-11-2023. ನ್ಯಾಯಾಲಯದಿಂದ ಬಂದ ಮೊದಲನೇ ವಾರಂಟ್ ನ ದಿನಾಂಕ ಗೊತ್ತಿಲ್ಲ. ಮೊದಲನೇ ವಾರಂಟ್ ಒ.ಎಸ್ ನಂ. 351/2024 ರ ದಾವೆಗೆ ಸಂಬಂಧಿಸಿದೆ. ಸದರಿ ನೋಟೀಸ್ ಈ ಪ್ರಕರಣಕ್ಕೆ ಸಂಬಂದಿಸಿಲ್ಲ ಎಂದರೆ ಸರಿ.

ಸದರಿ ಮೊದಲನೇ ವಾರಂಟ್ ನ ಮೇಲೆ ನಾನು ಸ್ಥಳ ತನಿಖೆ ಮಾಡಲು ಹೋಗಿದ್ದೆ. ಸದರಿ ದಾವೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಪಕ್ಷಗಾರರಿಗೆ ನೋಟೀಸ್ ಕೊಟ್ಟಿದ್ದೆ. ಪ್ರಸ್ತುತ ಪ್ರಕರಣದಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಪಕ್ಷಗಾರರಿಗೆ ನೋಟೀಸ್ ಕೊಟ್ಟಿಲ್ಲ. ಪಕ್ಷಗಾರರ ದಾಖಲೆಗಳನ್ನು ನಾನು ತನಿಖೆ

ಕಾಲದಲ್ಲಿ ಪರಿಶೀಲಿಸಿಲ್ಲ. ಸಾಕ್ಷಿಯು ಮುಂದುವರೆದು ತಮ್ಮ ಕಚೇರಿಯಲ್ಲಿರುವ ಮೂಲ ದಾಖಲೆಗಳ ಆಧಾರದ ಮೇಲೆ ತನಿಖೆ ಕೆಲಸ ಮಾಡಿರುವುದಾಗಿ ನುಡಿಯುತ್ತಾರೆ. ನಮ್ಮ ಇಲಾಖೆಯ ದಾಖಲೆಗಳಂತೆ ದಾವಾ ಆಸ್ತಿಯು 2015 ರಲ್ಲಿ ಪೋಡಿಯಾಗಿರಬಹುದು. ಸಾಕ್ಷಿಯು ಮುಂದುವರೆದು ಪಹಣಿಯಲ್ಲಿ ಸ್ಪಷ್ಟವಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಪೋಡಿಯಾದ ದಿನಾಂಕವನ್ನು ಪಹಣಿಯಲ್ಲಿ ನಮೂದು ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತ್ಯೇಕವಾಗಿ ಪಹಣಿ ಆದಾಗ ಅದು ಪೋಡಿಯಾಂದಂತಹ ಸೂಚನೆ ಎಂದು ನುಡಿಯುತ್ತಾರೆ. ಪೋಡಿಯಾದಂತಹ ಸಮಯದಲ್ಲಿ ಮಾಡಿದಂತಹ ನಕ್ಷೆ ಮತ್ತು ಮಹಜರ್ ನ ದಾಖಲೆ ನಮ್ಮಲ್ಲಿ ಇರುತ್ತದೆ ಎಂದರೆ ಸರಿ.

ದಾವಾ ಆಸ್ತಿಯು ಪೋಡಿ ಆದಂತಹ ಸಮಯದಲ್ಲಿ ಮಾಡಿದಂತಹ ನಕ್ಷೆಯಲ್ಲಿ ಅದರ ಕ್ಷೇತ್ರ ಎಷ್ಟಿದೆ ಎಂದು ಗೊತ್ತಿಲ್ಲ. ಸ್ಥಳ ತನಿಖೆ ಸಮಯದಲ್ಲಿ ಹಿಸ್ಸಾ ಮತ್ತು ಟಿಪ್ಪಣಿ ದಾಖಲೆಗಳನ್ನು ತೆಗೆದುಕೊಂಡು ಹೋಗಿರುತ್ತೇನೆ. ಸದರಿ ಎರಡು ದಾಖಲೆಗಳು ಪ್ರಸ್ತುತ ನನ್ನ ಬಳಿ ಇಲ್ಲ. ಅದರಲ್ಲಿ ನಮೂದಿಸಿರುವ ವಿಸ್ತೀರ್ಣ ಗೊತ್ತಿಲ್ಲ.

ವಾದಿ ಮತ್ತು ಪ್ರತಿವಾದಿಯ ಆಸ್ತಿಗಳ ಅಳತೆ, ಅದ್ದುಬಸ್ತುಗಳ ಸ್ಪಷ್ಟನೆ ಮತ್ತು ದಾರಿಯ ಗುರುತು ಮಾಡಲು ಸ್ಥಳ ತನಿಖೆಗೆ ಹೋಗಿದ್ದೆ. ಆಜು-ಬಾಜುದಾರರಿಗೆ ನೋಟೀಸ್ ಕೊಟ್ಟಿದ್ದೆ. ಸಾಕ್ಷಿಯು ಮುಂದುವರೆದು 3 ಜನರಿಗೆ ಮಾತ್ರ ನೋಟೀಸ್ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವೆರದು ಸದರಿ 2 ಆಸ್ತಿಗಳ 4 ದಿಕ್ಕುಗಳಲ್ಲಿ 3 ಜನರ ಆಸ್ತಿಗಳು ಇರುವುದರಿಂದ ಸದರಿ 3 ಜನರಿಗೆ ನಿಸಿ-4 ರಂತೆ ನೋಟೀಸ್ ಕೊಟ್ಟಿರುವುದಾಗಿ ನುಡಿಯುತ್ತಾರೆ. ನಿಸಿ-2 ರಲ್ಲಿ 3 ಜನ ಬಾಜುದಾರರು ಎಂದು ನಮೂದಿಸಲಾಗಿದೆ. ಸರ್ವೆ ನಂ. 19 ರವರಿಗೆ ನೋಟೀಸ್ ಕೊಟ್ಟಿರುತ್ತೇನೆ. ದಾವಾ ಆಸ್ತಿಯ ಉತ್ತರಕ್ಕಿರುವ ಬಾಜುದಾರರಿಗೆ ದಾರಿ ಇರುವ ಕಾರಣ ನೋಟೀಸ್ ಕೊಟ್ಟಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಸದರಿ ರಸ್ತೆ ಅಂಟಿಕೊಂಡಿದೆ ಎಂದರೆ ಸರಿ. ಸದರಿ ದಾರಿಯ ಉತ್ತರಕ್ಕೆ ಸರ್ವೆ ನಂ. 44 ರ ಬಡಾವಣೆ ಇದೆ ಎಂದರೆ ಸರಿ. ಸದರಿ ಬಡಾವಣೆಯವರು ಸದರಿ ಬಡಾವಣೆಯ ನಂತರ ಚರಂಡಿ ನಿರ್ಮಿಸಿದ್ದು ಅದರ ನಂತರ ರಸ್ತೆ ಇದೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಸದರಿ ಬಡಾವಣೆ ಮಧ್ಯೆ ರಸ್ತೆ ಇದೆ

ಎಂದರೆ ಸಾಕ್ಷಿಯು ಸ್ಥಳದಲ್ಲಿ ಇದೆ ಎಂದು ಮತ್ತು ದಾಖಲೆಗಳ ಪ್ರಕಾರ ಸದರಿ ರಸ್ತೆ ಅಸ್ತಿತ್ವದಲ್ಲಿ ಇಲ್ಲ ಎಂದು ನುಡಿಯುತ್ತಾರೆ.

**(**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು**.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು